

ರಾಜಾ ರವಿವರ್ಮನ ಕಲ್ಪನೆಯಲ್ಲಿ ಗೋಪಿಕೆಯರೊಂದಿಗೆ ಶ್ರೀಕೃಷ್ಣ
ಕಲಾಕೃತಿ ಕೃಪೆ: 'ಪರಸರಾಮ್ ಮಂಘಾರಾಮ್' ಪ್ರಕಾಶನದ 'ರಾಜಾ ರವಿವರ್ಮ: ದಿ ಪೈಂಟರ್ ಪ್ರಿನ್ಸ್'




■ ಗೀತಾ ಸೀತಾರಾಮ್

# ರಾಜರಾಜವರ್ಮ

ಕಿಳಿಮಾನೂರಿನ ದೇವಿ ಭಗವತಿಯ ದೇವಾಲಯವನ್ನೆಲ್ಲಾ ಹೊರಗೂ ಒಳಗೂ ಹೊಸದಾಗಿ ಸುಣ್ಣಬಣ್ಣ ಹಾಕಿಸಿದ ತೃಪ್ತಿ ನನಗೆ. ಜೊತೆಗೆ ನಮ್ಮ ಮನೆತನದ ದೇವಾಲಯದ ಗೋಡೆಗಳಿಗೂ ಸುಣ್ಣ ಬಣ್ಣ ಮಾಡಿಸಿದೆ. ಇನ್ನೇನು ದೇವಿಯ ವಾರ್ಷಿಕ ಉತ್ಸವ ಹತ್ತಿರ ಬರುತ್ತಿದೆಯಲ್ಲ. ನನ್ನ ಪೂಜಾವಿಧಿಗಳನ್ನು ಮುಗಿಸಿ ಹೊರಬಂದಾಗ ನನ್ನ ಮನೆಯಾಳು ಪಾಚನ್ ಕೈಕಟ್ಟಿ ನಿಂತಿದ್ದು ಕಂಡಿತು. ಏನನ್ನೋ ವಿನಂತಿಸಲು ನಿಂತಿರುವುದು ಅರಿವಾಗಿ ಕೇಳಿದೆ 'ಹೇಳು ಪಾಚನ್, ಏನು ವಿಷಯ?'

'ಸ್ವಾಮಿ, ಹೇಳಲು ನಾಲಿಗೆಯೇ ಏಳುತ್ತಿಲ್ಲ. ನನಗೆ ಚಾಡಿ ಹೇಳಬೇಕೆಂಬ ಉದ್ದೇಶ ಖಂಡಿತ ಇಲ್ಲ, ಆದರೆ...'

'ಪೀಠಿಕೆ ಬೇಡ, ಏನಾಯ್ತು ಹೇಳು',

'ಸ್ವಾಮಿ, ಹೊಸದಾಗಿ ಸುಣ್ಣ ಬಣ್ಣ ಮಾಡಿಸಿದ ಬಿಳಿಯ ಗೋಡೆಗಳ ಮೇಲೆಲ್ಲಾ ಮಸಿಬಣ್ಣ ಬಳಿದಿದ್ದಾರೆ ಮಕ್ಕಳು...'

'ಯಾರು ರವಿ, ಮಂಗಳ?'

'ಹೌದು ಒಡೆಯ. ಅವರೇ....'

ಇಡೀ ಹವೇಲಿಗೇ ತಿಳಿದ ವಿಷಯ ನನ್ನ ಕೋಪ! ಇಂತಹ ಅಬದ್ಧ ಕಾರ್ಯ ಮಾಡಿದವರಿಗೆ ನಾನು ಏನೇನು ಶಿಕ್ಷೆ ಕೊಡುವೆನೆಂದು ಎಲ್ಲರೂ ಬಲ್ಲವರೇ. ಹಾಗಾಗಿ ಪಾಚನ್ ಹೆದರುತ್ತಲೇ ಹೇಳಿದ್ದು.

'ಎಲ್ಲಿ, ನಡಿ, ತೋರಿಸು ಏನು ಬರೆದಿದ್ದಾರೆ' ಮನೆಯೊಳಗಿನ ಬಿಳೀ ಗೋಡೆಗಳು, ಮನೆತನದ ಗುಡಿಯ ಗೋಡೆಗಳು ಎಲ್ಲದರ ಮೇಲೂ ಇದ್ದಿಲಿನಿಂದ ಚಿತ್ರ ಬಿಡಿಸಲಾಗಿತ್ತು.

ನಾನು ಚಿತ್ರಗಳನ್ನು ನಿಧಾನವಾಗಿ ಆಳವಾಗಿ ನೋಡತೊಡಗಿದೆ. ಬರಿಯ ಏಳು ವರ್ಷದ ಬಾಲಕ ಇಷ್ಟು ಚೆನ್ನಾಗಿ ಚಿತ್ರಿಸಲು ಸಾಧ್ಯವೇ? ನನಗಾದರೂ